**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 20 ಪ್ರಾ.ಸಾ. : 17**

| | |
|---|---|
| ಸಾಕ್ಷಿಯ ಹೆಸರು | : ವೀರಣ್ಣ |
| ತಂದೆಯ ಹೆಸರು | : ಗುರುಸಿದ್ದಪ್ಪ ತುರುಮುರಿ |
| ವಯಸ್ಸು | : 66 ವರ್ಷ |
| ಉದ್ಯೋಗ | : ನಿವೃತ್ತ ಹೆಚ್ಚುವರಿ ಆಯುಕ್ತರು , ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ |
| ವಾಸ | : ಧಾರವಾಡ |

**ದಿನಾಂಕಃ 06-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಜುಲೈ 2014 ರಿಂದ ಫೆಬ್ರವರಿ 2018 ರವರಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡದಲ್ಲಿ ಹೆಚ್ಚುವರಿ ಆಯುಕ್ತನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನನಗೆ ಸೆಪ್ಟೆಂಬರ್ 2014 ರಲ್ಲಿ ಜಿಲ್ಲಾ ಪಂಚಾಯತ್ ಕಾರವಾರದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಂದ ಗಣೇಶ ಅನಂತ ನಾಯ್ಕ , ಸಹಾಯಕ ನಿರ್ದೇಶಕರು , ಅಕ್ಷರ ದಾಸೋಹ ಯೋಜನೆ ತಾಲೂಕು ಪಂಚಾಯತಿ ಕುಮಟಾರವರ ವಿರುದ್ಧ ಲೋಕಾಯುಕ್ತರವರು ಟ್ರ್ಯಾಪ್ ಪ್ರಕರಣ ದಾಖಲು ಮಾಡಿದ್ದಾರೆ ಎಂದು ಅವರು ಟ್ರ್ಯಾಪ್ ಆಗಿರುವುದರಿಂದ ಅವರ ವಿರುದ್ಧ ಅಭಿಯೋಜನೆ ಮಾಡಲು ಅಭಿಯೋಜನಾ ಮಂಜೂರಾತಿ ನೀಡಬೇಕೆಂದು ಪತ್ರ ಬಂದಿತ್ತು. ಹಾಲಿನ ಪುಡಿ ಸರಬರಾಜು ಮಾಡುವಾಗ ಸಾಗಣೆ ಮಾಡುವವರ ಕಡೆಯಿಂದ ಮೇಲ್ಕಂಡ ಆರೋಪಿ ಲಂಚ ಕೇಳಿದ್ದರು ಆ ಸಂಬಂಧದಲ್ಲಿ ಟ್ರ್ಯಾಪ್ ಆಗಿದ್ದರು. ಅಭಿಯೋಜನಾ ಮಂಜೂರಾತಿ ಕೋರಿ ಬರೆದಿದ್ದ ಪತ್ರದ ಜೊತೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ನನಗೆ ಕಳುಹಿಸಿದ್ದರು. ನಾನು ಆ ದಾಖಲಾತಿಗಳನ್ನೆಲ್ಲಾ ಪರಿಶೀಲನೆ ಮಾಡಿದೆ . ಆ ದಾಖಲಾತಿಗಳ ಪರಿಶೀಲನೆಯಿಂದ ಮೇಲ್ನೋಟಕ್ಕೆ ಆರೋಪಿ ವಿರುದ್ಧ ಲಂಚ ನಿರೋಧಕ ಕಾಯ್ದೆ 1988 ರ ಕಲಂ 7, 13(1)(ಡಿ) ಸಹ ಕಲಂ 13(2) ರಡಿಯಲ್ಲಿ ಆರೋಪ ಸಾಬೀತಾಗಿರುವುದು ನನಗೆ ಮನವರಿಕೆಯಾಯಿತು. ಆದ್ದರಿಂದ ನಾನು ಅಭಿಯೋಜನಾ ಮಂಜೂರಾತಿ ಆದೇಶ

ನೀಡಿರುತ್ತೇನೆ. ಈಗ ನಾನು ನೀಡಿದ ದಿನಾಂಕ 24.12.2014 ರ ಅಭಿಯೋಜನಾ ಮಂಜೂರಾತಿ ಆದೇಶವನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ . ನಾನು ಪುಟ ಸಂ. 1, 3 ರಲ್ಲಿ ಸಣ್ಣ ಸಹಿ ಮಾಡಿದ್ದೇನೆ. ಕೊನೆಯ ಪುಟದಲ್ಲಿ ನನ್ನ ಪೂರ್ತಿ ಸಹಿ ಮಾಡಿದ್ದೇನೆ. ಸದರಿ ಅಭಿಯೋಜನಾ ಮಂಜೂರಾತಿಯನ್ನು ಈಗಾಗಲೇ ನಿ.ಪಿ. 43/1 ಎಂದು ಗುರುತಿಸಲಾಗಿದೆ. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 43/1(ಎ) ಎಂದು ಕೊನೆಯ ಪುಟದಲ್ಲಿ ಗುರುತಿಸಲಾಯಿತು. ಸರ್ಕಾರದ ದಿನಾಂಕ 22.02.2008 ರ ಸುತ್ತೋಲೆ ಸಂ. ಈಡಿ.250 ಡಿಪಿಇ 2006 ರ ಅಡಿಯಲ್ಲಿ ಅಭಿಯೋಜನಾ ಮಂಜೂರಾತಿ ನೀಡಲು ನಾನು ಸಕ್ಷಮ ಅಧಿಕಾರಿಯಾಗಿದ್ದೆ ಎಂದು ಸಾಕ್ಷಿಯು ಆ ಸುತ್ತೋಲೆಯ ಒಂದು ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ. ಆರೋಪಿ ಪರ ನ್ಯಾಯವಾದಿಗಳು ಅದು ದೃಢೀಕೃತ ದಾಖಲಾತಿ ಅಲ್ಲ ಎಂದು ತಕರಾರು ಮಾಡಿದ್ದಾರೆ. ತಕರಾರಿಗೊಳಪಟ್ಟು ನಿ.ಪಿ. 49 ಎಂದು ಅದನ್ನು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

2. ಮೇಲ್ಕಂಡ ಸುತ್ತೋಲೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆ ಮಾಡಿದ್ದಾರಾ ಎಂದರೆ ನಾನು ಪ್ರಕಟಣೆ ಮಾಡಿರುವುದನ್ನು ನೋಡಿರುವುದಿಲ್ಲ. ಈಗ ನನಗೆ ಎದುರು ಮಾಡಿದ ಕರ್ನಾಟಕ ರಾಜ್ಯ ಪತ್ರ ದಿನಾಂಕ 29.01.2008 ರಲ್ಲಿ ಪ್ರಕಟವಾಗಿರುವುದು ನಾನು ಹಾಜರುಪಡಿಸಿದ ನಿ.ಪಿ. 49 ಸುತ್ತೋಲೆಗೆ ಸಂಬಂಧಿಸಿದ್ದೇ ಆಗಿರುತ್ತದೆ . ಅದನ್ನು ನಿ.ಡಿ. 26 ಎಂದು ಗುರುತಿಸಲಾಯಿತು. ಅದು ನೆರಳಚ್ಚು ಪ್ರತಿಯಾಗಿದೆ. ನಿ.ಡಿ. 26 ಆಂಗ್ಲ ಭಾಷೆಯಲ್ಲಿ ಇದೆ ಹಾಗೂ ನಿ.ಪಿ. 49 ಕನ್ನಡ ಭಾಷೆಯಲ್ಲಿ ಇದೆ ಎಂದರೆ ಹೌದು . (ನಿ.ಡಿ. 26 ರಲ್ಲಿ 2 ನೇ ಪುಟದಲ್ಲಿ ಕ್ರಮ ಸಂ. 3 ರಲ್ಲಿ 2 ನೇ ಅಂಕಣದಲ್ಲಿ Additional Commissioner for Public Instruction, Dharwad ಎಂದು ಇರುತ್ತದೆ). ನಿ.ಡಿ. 26 ರಲ್ಲಿ 2 ನೇ ಪುಟದಲ್ಲಿ ಕೊನೆಯಲ್ಲಿ "Provided that, the Government shall continue to be the disciplinary authority for the purpose of imposing any of the penalties in respect of the persons appointed to the posts in the cadres specified in column (3) of

the table above before the date of this notification subject to delegation of powers in this behalf ” ಎಂದು ಇದೆ ಎಂದರೆ ಹೌದು . ನಾನು ಹಾಜರುಪಡಿಸಿರುವ ನಿ.ಪಿ. 49 ರಲ್ಲಿ ಅದಕ್ಕೆ ಸಂಬಂಧಿಸಿದ ಕನ್ನಡ ಭಾಷಾಂತರದ ಭಾಗ ಯಥಾವತ್ತಾಗಿ ಇಲ್ಲ ವ್ಯತ್ಯಾಸ ಇದೆ ಎಂದರೆ ಭಾಷಾಂತರದಲ್ಲಿ ವ್ಯತ್ಯಾಸ ಇದೆ. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಇರುವ ಆ ಭಾಗ ಸ್ವಲ್ಪ ಬೇರೆ ಅರ್ಥ ನೀಡುತ್ತದೆ . ನಿ.ಪಿ. 49 ರಲ್ಲಿ delegation of power in this behalf ಎಂದು ಉಲ್ಲೇಖ ಆಗಿಲ್ಲ ಎಂದರೆ ಹೌದು . Government shall continue to be the disciplinary authority ಎಂದು ನಿ.ಪಿ. 49 ರಲ್ಲಿ ಇಲ್ಲ ಎಂದರೆ ಹೌದು . ಸರ್ಕಾರ ಮುಖ್ಯ ಕಾರ್ಯದರ್ಶಿಯವರಿಂದ ಪ್ರತಿನಿಧಿಸಲ್ಪಡುತ್ತದೆ ಎಂದರೆ ಹೌದು . ಸರ್ಕಾರ ಆ ಕೆಲಸ ಮಾಡಬೇಕು ಎಂದು ಇದ್ದರೆ ಅದನ್ನು ಪ್ರಧಾನ ಕಾರ್ಯದರ್ಶಿ ಮಾಡಬೇಕಾಗಿರುತ್ತದೆ ಎಂದರೆ ಹೌದು . ನಿ.ಪಿ. 49 ರ ದೃಢೀಕೃತ ನಕಲು ನನಗೆ ಸಿಗುವುದಿಲ್ಲ ಕಾರಣ ನಾನು ನಿವೃತ್ತಿಯಾಗಿದ್ದೇನೆ.

3. ಅಭಿಯೋಜನಾ ಮಂಜೂರಾತಿ ಕೋರಿ ನನಗೆ ಲೋಕಾಯುಕ್ತ ಪೊಲೀಸ್ ನವರು ಪತ್ರ ಬರೆದಿಲ್ಲ ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ನನಗೆ ಪತ್ರ ಬರೆದಿದ್ದರು. ಲೋಕಾಯುಕ್ತ ಪೊಲೀಸ್ ನವರು ಅಭಿಯೋಜನಾ ಮಂಜೂರಾತಿ ಕೋರಿ ಬರೆದಿದ್ದ ಪತ್ರವನ್ನು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ನನಗೆ ಕಳುಹಿಸಿದ್ದರು. ಆ ಪತ್ರವನ್ನು ನಾನು ವಾಪಸ್ಸು ಅಭಿಯೋಜನಾ ಮಂಜೂರಾತಿ ಜೊತೆ ಕಳುಹಿಸಿಲ್ಲ ಆ ಪತ್ರವನ್ನು ನನ್ನ ಕಚೇರಿ ಕಡತದಲ್ಲಿ ಇಟ್ಟಿರುತ್ತೇನೆ. ಕರ್ನಾಟಕ ಲೋಕಾಯುಕ್ತ ಪೊಲೀಸ್ ನವರು ಅಭಿಯೋಜನಾ ಮಂಜೂರಾತಿ ಕೋರಿ ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಪತ್ರ ಬರೆದಿದ್ದರು ನನಗೆ ಬರೆದಿರಲಿಲ್ಲ. ಅವರಿಗೆ ಅಭಿಯೋಜನಾ ಮಂಜೂರಾತಿ ನೀಡಬೇಕೆಂದು ಆ ಪತ್ರವನ್ನು ಲೋಕಾಯುಕ್ತ ಪೊಲೀಸ್ ನವರು ಬರೆದಿದ್ದರು. ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಆರೋಪಿ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡುವ ಅಧಿಕಾರ ಇರಲಿಲ್ಲ. ಲೋಕಾಯುಕ್ತ ಪೊಲೀಸ್ ನವರಿಗೆ ನೇರವಾಗಿ ನನಗೆ ಪತ್ರ ಬರೆಯಲು ತೊಂದರೆ ಇರಲಿಲ್ಲ ಎಂದರೆ ಆರೋಪಿಯು ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ

ಅಧೀನದಲ್ಲಿ ಕೆಲಸ ಮಾಡುತ್ತಿದ್ದುದ್ದರಿಂದ ಲೋಕಾಯುಕ್ತ ಪೊಲೀಸ್ ನವರು ಅವರಿಗೆ ಅಭಿಯೋಜನಾ ಮಂಜೂರಾತಿ ಕೋರಿ ಪತ್ರ ಬರೆದಿದ್ದರು.

4. ಲೋಕಾಯುಕ್ತ ಪೊಲೀಸ್ ನವರು ನನ್ನನ್ನು ಅಭಿಯೋಜನಾ ಮಂಜೂರಾತಿ ಕೋರದೇ ಇದ್ದರೂ ನಾನೇ ನನ್ನ ಅಧಿಕಾರ ವ್ಯಾಪ್ತಿ ಮೀರಿ ನಿ.ಪಿ. 43/1 ಅನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ 1999 ರಲ್ಲಿ ನೇಮಕ ಆಗಿದ್ದಾರೆ ಎಂದರೆ ಹೌದು . ಈಗ ತೋರಿಸಿದ ಜ್ಞಾಪನ ನೋಟರಿಕೃತ ನಕಲು ಅದಕ್ಕೆ ಸಂಬಂಧಪಟ್ಟಿದೆ ಎಂದರೆ ಹೌದು. ಅದನ್ನು ನಿ.ಡಿ. 27 ಎಂದು ಗುರುತಿಸಲಾಯಿತು. ಈಗ ತೋರಿಸಿದ ನೋಟರಿಕೃತ ದಿನಾಂಕ 04.04.2005 ರ ಅಧಿಸೂಚನೆಯನ್ನು ಕರ್ನಾಟಕ ಸರ್ಕಾರ ಶಿಸ್ತು ಕ್ರಮ ಜರುಗಿಸುವ ಬಗ್ಗೆ ನೇಮಕಾತಿ ಪ್ರಾಧಿಕಾರ ಯಾರು ಎಂದು ನೀಡಿದ್ದಾರೆ ಎಂದರೆ ಹೌದು . ಅದನ್ನು ನಿ.ಡಿ. 28 ಎಂದು ಗುರುತಿಸಲಾಯಿತು. ನಿ.ಡಿ. 28 ರಲ್ಲಿ ಸಹ "Provided that the government shall continue to be the disciplinary authority" ಎಂದು ಇದೆ ಎಂದರೆ ಹೌದು . "Before the date of this notification" ಎಂದೂ ಸಹ ಇದೆ ಎಂದರೆ ಹೌದು . ಈ ಪ್ರಕರಣ ಆದಾಗ ಆರೋಪಿ ಜಿಲ್ಲಾ ತಾಲೂಕು ಪಂಚಾಯತಿ ಕುಮಟಾದಲ್ಲಿ ಅಕ್ಷರ ದಾಸೋಹ ವಿಭಾಗದಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದ. ಸಹಾಯಕ ನಿರ್ದೇಶಕನ ಹುದ್ದೆ ಮತ್ತು ಮುಖ್ಯೋಪಾಧ್ಯಯ ಹುದ್ದೆ ತತ್ಸಮಾನ ಹುದ್ದೆ ಎಂದರೆ ಹೌದು . ಆರೋಪಿಯನ್ನು ಮುಖ್ಯೋಪಾಧ್ಯಾಯರ ಹುದ್ದೆಯಿಂದ ಸಹಾಯಕ ನಿರ್ದೇಶಕನ ಹುದ್ದೆಗೆ ನಿಯೋಜನೆ ಮಾಡಿದ್ದರು ಎಂದರೆ ಸರ್ಕಾರ ಮಾಡಿದೆ ನನಗೆ ಗೊತ್ತಿಲ್ಲ. Non–tutorial ಎಂದರೆ ಬೋಧಕೇತರ ಹುದ್ದೆ ಎಂದರ್ಥ ಎಂದರೆ ಹೌದು . ಆರೋಪಿ ಪ್ರಕರಣ ಆದಾಗ non–tutorial ಸಿಬ್ಬಂದಿಯಾಗಿದ್ದರು ಎಂದರೆ ಹೌದು . ನಿ.ಡಿ. 28 ರಲ್ಲಿ ಮೊದಲನೇ ಕ್ರಮ ಸಂಖ್ಯೆ ವಿರುದ್ಧ ಇರುವ 3 ನೇ ಅಂಕಣದಲ್ಲಿ non–tutorial ಎಂದು ಇದೆ ಎಂದರೆ ಹೌದು . ಆರೋಪಿಯ ಹುದ್ದೆ ಬಿ ಶ್ರೇಣಿ ಹುದ್ದೆ ಆಗಿತ್ತು ಎಂದರೆ ಹೌದು . ಯಾವುದೇ ಸರ್ಕಾರಿ ಆದೇಶ ಇದ್ದಾಗ ನೇಮಕಾತಿಗೆ ಸಂಬಂಧಿಸಿದಂತೆ ಮೊದಲ ನೇಮಕಾತಿ ಎಂದರೆ ಆ ಸರ್ಕಾರಿ ಆದೇಶ ಹೊರಡಿಸುವುದಕ್ಕಿಂತ ಮೊದಲಿನ ನೇಮಕಾತಿ ಎಂದರೆ ಹೌದು . ಈಗ ತೋರಿಸಿದ ನೋಟರಿಕೃತ

ಅಧಿಸೂಚನೆ ದಿನಾಂಕ 11.02.2010 ಅನ್ನು ಸರ್ಕಾರ ಹೊರಡಿಸಿದೆ ಎಂದರೆ ಹೌದು . ಅದು ಅಧಿಸೂಚನೆ ಸಂ. ಸಿಆಸುಇ 46 ಸೇಇವಿ 2008 ಆಗಿದ್ದು ಅದನ್ನು ನಿ.ಡಿ. 29 ಎಂದು ಗುರುತಿಸಲಾಯಿತು. ನಿ.ಡಿ. 29 ರಲ್ಲಿ "ಮೊದಲ ನೇಮಕಾತಿಗಳಿಗೆ ಸಂಬಂಧಪಟ್ಟ" ಎಂದು ಉಲ್ಲೇಖಿಸಿದ್ದಾರೆ ಎಂದರೆ ಹೌದು . ನಿ.ಡಿ. 29 ರಲ್ಲಿ ತಹಶೀಲ್ದಾರ್ ಗ್ರೇಡ್ −2 ಸಮೂಹ ಬಿ ಹುದ್ದೆಗಳನ್ನು ಹೊರತು ಪಡಿಸಿ ಎಲ್ಲಾ ಇಲಾಖೆ / ಸೇವೆಗಳಲ್ಲಿರುವ ಸಮೂಹ ಬಿ ಹುದ್ದೆಗಳ ಮೊದಲ ನೇಮಕಾತಿಗಳಿಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ನೇಮಕಾತಿ ಪ್ರಾಧಿಕಾರವೆಂದು ನಿರ್ದಿಷ್ಟ ಪಡಿಸಲಾಗಿದೆ ಎಂದು ಇದೆ ಎಂದರೆ ಹೌದು . ನಾನು ಆ ಸಮಯದಲ್ಲಿ ಶಿಕ್ಷಣ ಇಲಾಖೆಗೆ ಆಗಲಿ ಅಥವಾ ಅಕ್ಷರ ದಾಸೋಹ ವಿಭಾಗಕ್ಕೆ ಆಗಲಿ ಇಲಾಖಾ ಮುಖ್ಯಸ್ಥ ಆಗಿರಲಿಲ್ಲ ಎಂದರೆ 2010 ರಲ್ಲಿ ನಾನು ಇಲಾಖಾ ಮುಖ್ಯಸ್ಥ ಆಗಿರಲಿಲ್ಲ. 2010 ರ ನಂತರದಿಂದ ಇಲ್ಲಿಯವರೆಗೆ ನಾನು ಇಲಾಖಾ ಮುಖ್ಯಸ್ಥ ಅಲ್ಲ ಎಂದರೆ ನಿ.ಪಿ. 49 ರ ಪ್ರಕಾರ ಇಲಾಖಾ ಮುಖ್ಯಸ್ಥ ಆಗುತ್ತೇನೆ, ನಿ.ಡಿ. 29 ರ ಪ್ರಕಾರ ಅಲ್ಲ. ಕರ್ನಾಟಕ ಸರ್ಕಾರದಲ್ಲಿ ಯಾವುದೇ ಇಲಾಖೆಗೆ ಮುಖ್ಯಸ್ಥರು ಎಂದರೆ ಆಯಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿರುತ್ತಾರೆ. ನಾನು ಇಲ್ಲಿಯವರೆಗೆ ಯಾವುದೇ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿರುವುದಿಲ್ಲ. 2008 ರ ಆದೇಶ ಮತ್ತು 2010 ರ ಆದೇಶ ಇದ್ದಾಗ 2010 ರ ಆದೇಶವನ್ನು ಪಾಲನೆ ಮಾಡಬೇಕಾಗುತ್ತದೆ ಎಂದರೆ ಹೌದು . ನಿ.ಡಿ. 29 ರ ಆದೇಶದ ಪ್ರಕಾರ ನನಗೆ ಅಭಿಯೋಜನಾ ಮಂಜೂರಾತಿ ನೀಡುವ ಅಧಿಕಾರ ಇಲ್ಲ ಎಂದರೆ ಹೌದು . ಅಭಿಯೋಜನಾ ಮಂಜೂರಾತಿ ನೀಡುವಾಗ ನಿ.ಡಿ. 29 ರ ಆದೇಶ ನನ್ನ ಗಮನದಲ್ಲಿ ಇರಲಿಲ್ಲ. ನಿ.ಡಿ. 29 ನನ್ನ ಗಮನದಲ್ಲಿ ಇದ್ದಿದ್ದರೆ ನಾನು ಅಭಿಯೋಜನಾ ಮಂಜೂರಾತಿ ನೀಡುತ್ತಿರಲಿಲ್ಲ. ಆರೋಪಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಮುಂದೆ ಅರ್ಜಿ ಸಂ. 2017/2014 ಅನ್ನು ಸಲ್ಲಿಸಿದ ವಿಚಾರ ನನಗೆ ಗೊತ್ತಿಲ್ಲ ನಾನು ಆ ವೇಳೆಗೆ ನಿವೃತ್ತಿಯಾಗಿದ್ದೆ.

5. ಹಾಲಿನ ಪುಡಿ ಸರಬರಾಜು ಮಾಡಲು ಫಿರ್ಯಾದಿಗೆ ಟೆಂಡರ್ ಮೂಲಕ ಆದೇಶ ನೀಡಲಾಗಿದೆ. ನಾನು ಆ ಆದೇಶವನ್ನು ನೋಡಿಲ್ಲ. ಅಭಿಯೋಜನಾ ಮಂಜೂರಾತಿ ನೀಡಿದಾಗ ನನ್ನ ಮುಂದೆ ಕರಡು ದೋಷಾರೋಪಣಾ ಪಟ್ಟಿ ಸಲ್ಲಿಸಿರಲಿಲ್ಲ. ಜಪ್ತು ಪಟ್ಟಿಯನ್ನು ನನ್ನ ಮುಂದೆ ಹಾಜರುಪಡಿಸಿರಲಿಲ್ಲ. ಅಭಿಯೋಜನಾ ಮಂಜೂರಾತಿ ಆದೇಶದಲ್ಲಿ red

handed ಎಂಬ ಪದವನ್ನು ತಪ್ಪಾಗಿ ಬಳಸಿದ್ದೇನೆ ಎಂದರೆ ಸರಿಯಲ್ಲ. ಲೋಕಾಯುಕ್ತ ಅಧಿಕಾರಿಗಳ ಒತ್ತಡದ ಮೇರೆಗೆ ನಾನು ಕಣ್ಣು ಮುಚ್ಚಿ ಅಭಿಯೋಜನಾ ಮಂಜೂರಾತಿ ನೀಡಿದ್ದೇನೆ ಎಂದರೆ ಸರಿಯಲ್ಲ. ಅಭಿಯೋಜನಾ ಮಂಜೂರಾತಿ ನೀಡುವಾಗ ನಾನು ಬುದ್ಧಿಮತ್ತೆ ಅನ್ವಯಿಸಿಲ್ಲ ಎಂದರೆ ಸರಿಯಲ್ಲ. ಅಭಿಯೋಜನಾ ಮಂಜೂರಾತಿ ನೀಡುವಾಗ ನನಗೆ ಆರೋಪಿ ವಿರುದ್ಧ ಮೇಲ್ನೋಟದ ಮೊಕದ್ದಮೆ ಕಂಡು ಬಂದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ